# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕವಿಪ್ರನಿನಿ/ಬಿ67/34286/2014-15

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು.

ದಿನಾಂಕ :

## ಅಧಿಕೃತ ಜ್ಞಾಪನ

ವಿಷಯ:- 39ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ
**ಅಥ್ಲೆಟಿಕ್ಸ್** ಕ್ರೀಡಾಕೂಟದಲ್ಲಿ ಕವಿಪ್ರನಿನಿ ತಂಡ ಭಾಗವಹಿಸುವ ಕುರಿತು
ಉಲ್ಲೇಖ:- ಈ ಕಛೇರಿ ಟಿಪ್ಪಣಿ ಸಂಖ್ಯೆ 34287 ದಿನಾಂಕ : 14-7-2014

*****

ದಿನಾಂಕ **25** ರಿಂದ **27ನೇ ಜುಲೈ 2014**ರವರೆಗೆ ಹರ್ಯಾಣದ ಕುರುಕ್ಷೇತ್ರದಲ್ಲಿ ನಡೆಯಲಿರುವ 39ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ **ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ** ಈ ಕೆಳಕಂಡ ಕ್ರೀಡಾಪಟುಗಳು ಹಾಗೂ **ಶ್ರೀ ಲಕ್ಷ್ಮಣಕುಮಾರ್**, ಕಿರಿಯ ಸಹಾಯಕ, ಚಿಕ್ಕಮಗಳೂರು ವಿಭಾಗ, ಮೆಸ್ಕಾಂ., ಇವರು ತಂಡದ ತರಬೇತುದಾರಾಗಿ ಹಾಗೂ **ಶ್ರೀ ಎಸ್.ಕುಮಾರ್**, ಜಂಟಿ ಕಾರ್ಯದರ್ಶಿ, ಬೆ.ವಿ.ಕಂ ಕ್ರೀಡಾಸಮಿತಿ, ಬೆಂ.ಮ.ಕ್ಷೇ.ವಲಯ ಕಛೇರಿ, ಬೆಸ್ಕಾಂ, ಇವರು ತಂಡದ ವ್ಯವಸ್ಥಾಪಕರಾಗಿ ಭಾಗವಹಿಸಲು ಅನುಮೋದಿಸಲಾಗಿದೆ.

ಕ್ರೀಡಾಪಟುಗಳು ದಿನಾಂಕ **22-7-2014** ರಂದು ಬೆಂಗಳೂರಿನಿಂದ ಕುರುಕ್ಷೇತ್ರಕ್ಕೆ ಪ್ರಯಾಣಿಸಿ ಪಂದ್ಯಾವಳಿಯಲ್ಲಿ ಭಾಗವಹಿಸಿ ದಿನಾಂಕ **30-03-2014** ರಂದು ಹಿಂದಿರುಗಲಿದ್ದಾರೆ.

| ಕ್ರಮ ಸಂಖ್ಯೆ | ಹೆಸರು ಶ್ರೀಯುತ | ಪದನಾಮ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಮಾರುತಿ ಎ. | ಮಜ್ದೂರು | ಜಯಪುರ ಶಾಖಾ ಕಛೇರಿ, ಆರ್.ಕೆ.ನಗರ, ಸೆಸ್ಕ್, ಮೈಸೂರು |
| 2 | ಹೇಮಂತರಾಜ್ ಜಿ.ಕೆ. | ಸಹಾಯಕ ಮಾರ್ಗದಾಳು | ಮಡಿಕೇರಿ ಉಪ-ವಿಭಾಗ, ಸೆಸ್ಕ್. |
| 3 | ರೇಮೆಂಡ್ ಪ್ರಸಾದ್ | ಮಾರ್ಗದಾಳು | ಕೊಣನೂರು ಶಾಖಾ ಕಛೇರಿ, ರಾಮನಾಥಪುರ ಉಪವಿಭಾಗ, ಸೆಸ್ಕ್ |
| 4 | ಸಂತೋಷ್ ಬಾವ್ಕರ್ | ಕಿ.ಮಾಪಕ ಓದುಗ | ಯೆಲ್ಲಾಪುರ ಉಪ-ವಿಭಾಗ, ಹೆಸ್ಕಾಂ. |
| 5 | ಮೋಹನ್ ಕುಮಾರ್ ಟಿ.ಎಲ್. | ಪ್ರೊ. ಮಜ್ದೂರು | ವಿಭಾಗೀಯ ಕಛೇರಿ, ತಿಪ್ಟೂರು, ಬೆಸ್ಕಾಂ. |
| 6 | ಕಿರಣ್ ಕುಮಾರ್ | ಸ.ಮಾರ್ಗದಾಳು | ಸಿ.ಎಸ್.ಸಿ., ಹೊಸಪೇಟೆ, ಜೆಸ್ಕಾಂ |
| 7 | ಬಿ.ಎಂ.ಮಂಜು | ಮಾರ್ಗದಾಳು | ಮೇಲುಕೋಟೆ ಶಾಖಾ ಕಛೇರಿ, ಪಾಂಡವಪುರ ಉಪ ವಿಭಾಗ, ಸೆಸ್ಕ್ |
| 8 | ಜಿನೇಶ್ ಜೆ. ಹೂಲಿ | ಸ.ಇಂ.(ವಿ) | ಊಟಿ ರೇಟಿಂಗ್ ವಿಭಾಗ, ಮಡಿಕೇರಿ ಸೆಸ್ಕ್ |
| 9 | ಕೆ.ಆರ್.ಯೋಗೇಶ್ | ಮಾರ್ಗದಾಳು | ಗ್ರಾಮೀಣ ಉಪವಿಭಾಗ, ಹಾಸನ, ಸೆಸ್ಕ್ |
| 10 | ಶ್ರೀನಿವಾಸ.ಡಿ.ಎಂ | ಕಿ.ಮಾರ್ಗದಾಳು | ಬೂದಗೆರೆ ಶಾಖೆ, ಉಪ-ವಿಭಾಗ, ದೇವನಹಳ್ಳಿ, ಬೆಸ್ಕಾಂ |
| 11 | ಪುರುಷೋತ್ತಮ | ಸಹಾಯಕ ಇಂಜಿನಿಯರ್ | 5ನೇ ಕೇಂದ್ರ ಉಪ-ವಿಭಾಗ, ಬೆಸ್ಕಾಂ., ಬೆಂಗಳೂರು |
| 12 | ದೇಸವರಾಜು | ಮೈಕಾನಿಕ್ ದರ್ಜೆ-2 | ಹಗರಿ ಬೊಮ್ಮನಹಳ್ಳಿ, ಹೊಸಪೇಟೆ, ಜೆಸ್ಕಾಂ |
| 13 | ಜಿಲಾನಿ.ಜಿ.ಎಂ | ಮಾರ್ಗದಾಳು | ಅಲ್ಲಾವರ ಉಪ ವಿಭಾಗ, ಶಿರಸಿ ವಿಭಾಗ, ಹೆಸ್ಕಾಂ |
| 14 | ನಟರಾಜ | ಮಾರ್ಗದಾಳು | ಅರಕೆರೆ ಶಾಖಾ ಕಛೇರಿ, ಶ್ರೀರಂಗಪಟ್ಟಣ ಉಪ ವಿಭಾಗ, ಸೆಸ್ಕ್ |
| 15 | ವಿನೋದ್ ಕುಮಾರ್ | ಕಿ.ಇಂ(ವಿ) | 110 ಕೆ.ವಿ.ಸ್ಟೇಷನ್, ಕೊಣಾಜೆ, ಕವಿಪ್ರನಿನಿ |

ಈ ಮುಂದೆ ಸೂಚಿಸಿರುವ ಆರ್ಥಿಕ ವೆಚ್ಚವನ್ನು ಭರಿಸಲು ಸಹ ಅನುಮೋದನೆ ನೀಡಲಾಗಿದೆ.

ಪಂದ್ಯಾವಳಿಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಬೆಂಗಳೂರಿನಿಂದ ಪಂದ್ಯಾವಳಿಯು ನಡೆಯುವ ಕೇಂದ್ರಕ್ಕೆ ಪ್ರಯಾಣಿಸಿ ಹಿಂದಿರುಗುವ ಅವಧಿಯವರೆವಿಗೆ ಸಮಾನ ದಿನಭತ್ಯೆಯಾಗಿ ದಿನವೊಂದಕ್ಕೆ **ರೂ. 200**/- (ಇನ್ನೂರು ರೂಪಾಯಿಗಳು ಮಾತ್ರ) ರಂತೆ ಮತ್ತು ನೌಕರರ ಸೇವಾ ನಿಯಮಗಳ ನಿಬಂದನೆ **401**(ಬಿ) ಅನ್ವಯ **ಎರಡನೇ ದರ್ಜೆ ರೈಲು / ಬಸ್** ಪ್ರಯಾಣಕ್ಕೆ ನಿಯಮಾನುಸಾರ ಅರ್ಹರಾಗಿರುತ್ತಾರೆ.

ಕ್ರೀಡಾಪಟುಗಳು ಪಂದ್ಯಾವಳಿ ನಡೆಯುವ ದಿನಗಳಿಗೆ ದಿನವೊಂದಕ್ಕೆ ಉಪಹಾರ ಭತ್ಯೆಯಾಗಿ **ರೂ. 50**/- (ಐವತ್ತು ರೂಪಾಯಿಗಳು ಮಾತ್ರ) ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಪಂದ್ಯಾವಳಿಯಲ್ಲಿ ಭಾಗವಹಿಸುವ ಅವಧಿಯನ್ನು ಕರ್ತವ್ಯನಿರತ ಎಂದು ಪರಿಗಣಿಸುವುದು. ಪಂದ್ಯಾವಳಿಯಲ್ಲಿ ಭಾಗವಹಿಸಿದ ನಂತರ ಹಾಜರಾತಿ ಹೊರಡಿಸಲಾಗುವುದು.

ಕುರುಕ್ಷೇತ್ರದಿಂದ ಬೆಂಗಳೂರಿಗೆ ಹಿಂದಿರುಗಿದ ಒಂದು ವಾರದ ಒಳಗಾಗಿ ತಂಡದ ವ್ಯವಸ್ಥಾಪಕರು ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ಬಿ.ಎನ್.ಸತ್ಯಪ್ರೇಮಕುಮಾರ್
ಆಡಳಿತಾಧಿಕಾರಿ, ಮಾ.ಸಂ.ಅ ಕೇಂದ್ರ
ಕವಿಪ್ರನಿನಿ, ಹೂಡಿ, ಬೆಂಗಳೂರು

Athletic/O.M.